ದಿನಾಂಕ 08-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಎಂ.ಪಿ.ಹೆಚ್ ವಕೀಲರಿಂದ:**

1. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಶಿವಪ್ಪ, ಶಂಕ್ರಪ್ಪ, ರಾಜಶೇಖರಪ್ಪ, ಗಂಗಾಧರಪ್ಪ, ಚನ್ನಬಸಪ್ಪ ಮತ್ತು ಜಗದೇವಪ್ಪ ಎಂಬ ಆರು ಜನ ಸಹೋದರರು ಇರುತ್ತಾರೆ. ನಾನು ಮತ್ತು ನನ್ನ ಸಹೋದರರು ಸುಮಾರು 10-12 ವರ್ಷಗಳಿಂದಲೂ ಪ್ರತ್ಯೇಕವಾಗಿ ವಾಸವಿರುತ್ತೇವೆ.

2. ನನಗೆ ಮಹೇಶಕುಮಾರ ಮತ್ತು ಲಿಂಗರಾಜ ಎಂಬ ಇಬ್ಬರು ಗಂಡು ಮಕ್ಕಳು ಇದ್ದು, ಅವರು ಟಿ.ವಿ, ಕೇಬಲ್ ಮತ್ತು ಆಟೋಮೊಬೈಲ್ ವ್ಯವಹಾರವನ್ನು ಮಾಡುತ್ತಿದ್ದಾರೆ. ನಾನು ಮತ್ತು ನನ್ನ ಮಕ್ಕಳು ಒಟ್ಟಿಗೆ ಇದ್ದೇವೆ. ನನ್ನ ಕುಟುಂಬಕ್ಕೆ ಒಟ್ಟು 5 ಎಕರೆ ಜಮೀನು ಇವೆ. ನನ್ನ ಮತ್ತು 6 ಜನ ಸಹೋದರರ ಜಂಟಿ ಹೆಸರಿನಲ್ಲಿ ಸ ನಂ: 172 ರಲ್ಲಿ 3 ಎಕರೆ 10 ಗುಂಟೆ ಜಮೀನು ಇದ್ದು, ನನ್ನ ಹೆಂಡತಿ ಹೆಸರಿನಲ್ಲಿ ಸ ನಂ: 132/8 ರಲ್ಲಿ ವಿಸ್ತೀರ್ಣ 2 ಎಕರೆ 4 ಗುಂಟೆ ಜಮೀನು ಮತ್ತು ಕಿರಿಯ ಮಗನಾದ ಲಿಂಗರಾಜ ಅವರ ಹೆಸರಿನಲ್ಲಿ ಸ ನಂ: 132/8 ರಲ್ಲಿಯೇ 2 ಎಕರೆ ಜಮೀನು ಮತ್ತು ಹಿರಿಯ ಮಗನಾದ ಮಹೇಶ ಕುಮಾರ ರವರ ಹೆಸರಿನಲ್ಲಿ ಸ ನಂ: 174/7 ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನು ಇವೆ. ಸದರಿ ಜಮೀನುಗಳಿಗೆ ಬೋರ್ ವೆಲ್ ನ ನೀರಿನ ವ್ಯವಸ್ಥೆ ಇದೆ.

3. 1996 ನೇ ಇಸವಿಯಜಲ್ಲಿ ನಾನು ಮತ್ತು ಸಹೋದರರು ಒಟ್ಟು ಕುಟುಂಬ ದಲ್ಲಿಯೇ ಇದ್ದೆವು. ಆ ಸಮಯಕ್ಕೆ ಒಟ್ಟು ಕುಟುಂಬದ ವ್ಯವಹಾರವನ್ನು ನಾನೇ ನೋಡಿ ಕೊಳ್ಳುತ್ತಿದ್ದೆ. ದಾವಾ ಜಮೀನಾದ ಸ ನಂ: 174 ರಲ್ಲಿ ಮೊದಲಿಗೆ ಒಟ್ಟು 18 ಎಕರೆ

ಜಮೀನು ಇತ್ತು. ದಾವಾ ಆಸ್ತಿಯು ಪ್ರತಿವಾದಿಯರ ಕುಟುಂಬಕ್ಕೆ ಭೂ ನ್ಯಾಯ ಮಂಡಳಿಯು ಮಂಜೂರು ಮಾಡಿರುತ್ತದೆ. ದಾವಾ ಆಸ್ತಿಯನ್ನು 4 ಜನ ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದು, ಒಟ್ಟು 4 ಜನರ ಪೈಕಿ ಬಸಪ್ಪ ಅಥವಾ ಶಿವರಾಜಪ್ಪ ಪೈಕಿ ಒಬ್ಬರ ಹೆಸರಿನಲ್ಲಿ ಭೂ ನ್ಯಾಯ ಮಂಡಳಿಯು ಮಂಜೂರು ಮಾಡಿರಬಹುದು. ದಾವಾ ಆಸ್ತಿಯು ಪ್ರತಿವಾದಿಯರ ಕುಟುಂಬಕ್ಕೆ 1989 ರಲ್ಲಿ ಮಂಜೂರು ಆಗಿರುತ್ತದೆ. ರೈತನಾತೆಯಿಂದ ಪ್ರತಿವಾದಿಯರ ಕುಟುಂಬಕ್ಕೆ ಮಂಜೂರು ಆಗಿರುತ್ತದೆ ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಸಿರುತ್ತೆನೋ ಅಥವಾ ಇಲ್ಲವೋ ನನಗೆ ನೆನಪಿಲ್ಲ.



4. ಸ ನಂಃ 174 ರ ಒಟ್ಟು ವಿಸ್ತೀರ್ಣ 18 ಎಕರೆ 04 ಗುಂಟೆ ಜಮೀನನ್ನು ಪ್ರತಿವಾದಿಗಳ ಕುಟುಂಬದಿ ಹಿರಿಯರು ಮತ್ತು ಅವರ ಸಹೋದರರಿಗೆ ಮಂಜೂರು ಮಾಡಲಾಗಿತ್ತು ಎಂದರೆ ಸರಿ. ಸದರಿ ಒಟ್ಟು ಜಮೀನನ್ನು ಪ್ರತಿವಾದಿಯರ ತಂದೆ ಚನ್ನಬಸಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಆದ ಬಗ್ಗೆ ನಾನು ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. 1996 ರಲ್ಲಿ ಒಟ್ಟು ಜಮೀನು ವಿಭಾಗ ಆದ ಬಗ್ಗೆ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ದಾವಾ ಶೆಡ್ಯೂಲ್ ಆಸ್ತಿಯು ನೀರಾವರಿ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನೀರಾವರಿ ಜಮೀನಾಗಿಯೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಎರಡು ಬೋರ್ ವೆಲ್ ಗಳ ಮೂಲಕ ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

5. ದಾವಾ ಆಸ್ತಿಗೆ ದಕ್ಷಿಣಕ್ಕೆ ಹೊಂದಿ ಇರುವ ಸ ನಂಃ 174 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಮಹಮದ್ ಹಯಾತ್ ಬಡಗಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟಕ್ಕೆ ಸಂಬಂಧಿಸಿದಂತೆ 2012 ನೇ ಇಸವಿಯಲ್ಲಿ ನೋಂದಾಯಿತ ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿ. ಸ ನಂಃ 174 ರ ಒಟ್ಟು

ಜಮೀನಿನಲ್ಲಿ ಪ್ರತಿವಾದಿಗಳ ದಾಯಾದಿಗಳಿಗೆ ಇದ್ದ 1 ಎಕರೆ 30 ಗುಂಟೆ ಜಮೀನನ್ನು 2012 ರಲ್ಲಿ ಸದರಿ ಮಹಮದ್ ಹಯಾತ್ ಬಡಗಿಯವರು ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರಿಂದ ಖರೀದಿಸಿದ 2 ಎಕರೆ 20 ಗುಂಟೆ ಮತ್ತು ಪ್ರತಿವಾದಿಯರ ದಾಯಾದಿಯಿಂದ ಖರೀದಿಸಿದ 1 ಎಕರೆ 30 ಗುಂಟೆ ಜಮೀನನ್ನು ಖರೀದಿ ಮಾಡಿದ ದಿನಾಂಕದಿಂದಲೂ ಸದರಿ ಮಹಮದ್ ಹಯಾತ್ ಬಡಗಿಯವರು ಸ್ವಾಧೀನದಲ್ಲಿ ಇಟ್ಟುಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ.

-11-

6. ದಾವಾ ಆಸ್ತಿಯ ಉತ್ತರಕ್ಕೆ ನನ್ನ ದಾಯಾದಿಯಾದ ಹಿರಿಯಪ್ಪ ಕಮಡೊಳ್ಳಿ ರವರಿಗೆ ಸೇರಿದ ಸ ನಂಃ 172/2 ರ ಜಮೀನು ಇದೆ ಎಂದರೆ ಸರಿ. ಸದರಿ ಹಿರಿಯಪ್ಪ ಕಮಡೊಳ್ಳಿ ರವರು ನನ್ನ ಅಜ್ಜನ ಸಹೋದರರ ಮಗ ಇರುತ್ತಾನೆ. ಸ ನಂಃ 172/7 ರ ಜಮೀನಿನ ಪಶ್ಚಿಮಕ್ಕೆ ನನಗೆ ಸೇರಿದ ಸ ನಂಃ 172/6 ರ ಜಮೀನು ಇದೆ. ಸ ನಂಃ 172/6 ರ ಜಮೀನು ದಾವಾ ಆಸ್ತಿಯಾದ ಸ ನಂಃ 174/3 ರ ಜಮೀನಿನ ವಾಯುವ್ಯ ದಿಕ್ಕಿಗೆ ಇದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ